ಸಿವಿಲ್ ನ್ಯಾಯಾಲಯದ ಮುಂದೆ Declaratory Suit ನ ಮೂಲಕ ಪರಿಹರಿಸಿಕೊಳ್ಳಬೇಕೆಂದು ಆದೇಶಿಸಿರುತ್ತದೆ.

2. ಬೆಂಗಳೂರುನಗರ ಜಿಲ್ಲಾಧಿಕಾರಿಗಳ ವಿಚಾರಣೆ ಪ್ರಕರಣ:

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ನಾಗಸಂದ್ರ ಗ್ರಾಮದ ವಿವಿಧ ಸ.ನಂ.ಗಳ ಜಮೀನಿನ ಖಾತೆ ವಿಚಾರದಲ್ಲಿ ಬೆಂಗಳೂರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ಸಂ.ಆರ್.ಆರ್.ಟಿ.(2) ಸಿಆರ್–1/2002–03, ದಿನಾಂಕ: 8.12.2003 ರಿಂದ ವಿಚಾರಣೆ ನಡೆಯುತ್ತಿದೆ. ಈ ಪ್ರಕರಣವನ್ನು ಕಲಂ 136(3) ರಡಿ ಕೈಗೆತ್ತಿಕೊಳ್ಳಲಾಗಿದೆ. ಈ ಪ್ರಕರಣದಲ್ಲಿ ಮಠದ ಪರವಾಗಿ ಖಾತೆ ಕೋರಿ ಹಾಜರು ಪಡಿಸಿರುವ ದಾಖಲೆಗಳ ನೈಜತೆಯನ್ನು ಪರಿಶೀಲಿಸಲಾಗುತ್ತಿದೆ.

ಇ) ದಾಖಲಿಸಿರುವುದಿಲ್ಲ.

ತಾತ್ಕಾಲಿಕವಾಗಿ ನೇಮಕಗೊಂಡಿರುವ ನೌಕರರನ್ನು ಖಾಯಂಗೊಳಿಸುವ ಕುರಿತು

457 : (334)
ಶ್ರೀ ರುದ್ರೇಶ್ ಗೌಡ.ವೈ.ಎನ್(ಬೇಲೂರು)

ಅ) ಕಂದಾಯ ಇಲಾಖೆಯಲ್ಲಿ ಹಲವಾರು ವರ್ಷಗಳಿಂದ ತಾತ್ಕಾಲಿಕವಾಗಿ ನೇಮಕಗೊಂಡಿರುವ ನಕಲುಗಾರರು ಹಾಗೂ ಇತರೆ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ವಿಷಯ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈಗಾಗಲೇ ನೇಮಕಾತಿ ಪ್ರಯೋಮಿತಿ ದಾಟಿರುವ ಇವರ ಸೇವಾ ರಕ್ಷಣೆಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಕೆ.ಎಸ್.ಈಶ್ವರಪ್ಪ (ಉಪ ಮುಖ್ಯಮಂತ್ರಿ)

ಅ) ಯಾವುದೇ ಹಂಗಾಮಿ ನೌಕರರನ್ನು ಖಾಯಂ ಮಾಡುವ ವಿಷಯವು ಸರ್ಕಾರದ ನೀತಿ ನಿರ್ಧಾರಕ್ಕೆ ಒಳಪಟ್ಟಿದ್ದು ಈ ಬಗ್ಗೆ ಸರ್ಕಾರವು ಒಂದು ಸಮಗ್ರ ನೀತಿಯನ್ನು ರೂಪಿಸಿದ ನಂತರ ಪ್ರಸ್ತಾಪಿತ ನೌಕರರನ್ನು

ಖಾಯಂಗೊಳಿಸುವ ಪ್ರಸ್ತಾವನೆಯನ್ನು ಅರ್ಹತೆಯ ಆಧಾರದ ಮೇಲೆ ಪರಿಶೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸಿಬ್ಬಂದಿ ವಿವರ

410 : (326)

ಶ್ರೀ ಕೆ.ಜಿ.ಕುಮಾರಸ್ವಾಮಿ (ಶಿವಮೊಗ್ಗ ಗ್ರಾಮಾಂತರ)

ಅ) ಶಿವಮೊಗ್ಗ ತಾಲ್ಲೂಕು, ಉರಗಡೂರುನಲ್ಲಿ ಸಾರ್ವಜನಿಕ ನಿವೇಶನ ಹಂಚಲು ಭೂಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು; ನಿವೇಶನ ಕೋರಿ ಬಂದ ಅರ್ಜಿಗಳೆಷ್ಟು; ಆ ಪೈಕಿ ಇವರುಗಳಿಗೆ ನಿವೇಶನ ಹಂಚಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಆ) ಸಾರ್ವಜನಿಕರಿಂದ ನಿವೇಶನಕ್ಕಾಗಿ ಕಟ್ಟಿದ ಹಣವೆಷ್ಟು; ಈ ಹಣವನ್ನು ಏನು ಮಾಡಲಾಗಿದೆ; ಈ ಜಮೀನು ಪ್ರಾಧಿಕಾರದ ವಶದಲ್ಲಿದ್ದರೂ ನಿವೇಶನ ಹಂಚಲು ಕ್ರಮಕೈಗೊಳ್ಳದಿರಲು ಕಾರಣವೇನು;

ಇ) 2011–12ನೇ ಸಾಲಿನಲ್ಲಿ ಸಾರ್ವಜನಿಕ ಅಭಿವೃದ್ಧಿಗಾಗಿ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ವೆಚ್ಚ ಮಾಡಲಾಗಿದ ಹಣವೆಷ್ಟು; ಈ ರೀತಿ ವೆಚ್ಚ ಮಾಡಲು ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆಯೇ ಅಥವಾ ಪ್ರಾಧಿಕಾರದ ನಿಯಮಾವಳಿಯಲ್ಲಿ ಅವಕಾಶವಿದೆಯೇ; (ನಿರ್ವಹಿಸಿದ ಕಾಮಗಾರಿಗಳ ವೆಚ್ಚದ ವಿವರವಾದ ಮಾಹಿತಿ ನೀಡುವುದು);

ಈ) ರಾಜ್ಯದಲ್ಲಿ ಇರುವ ನಗರಾಭಿವೃದ್ಧಿ ಪ್ರಾಧಿಕಾರಗಳೆಷ್ಟು; ಈ ಪ್ರಾಧಿಕಾರಗಳಲ್ಲಿ ಸರ್ಕಾರದ ಮಂಜೂರಾತಿ ಹೊಂದಿದ ಸಿಬ್ಬಂದಿ ಎಷ್ಟು (ದರ್ಜೆವಾರು ವಿವರ ನೀಡುವುದು) ಪ್ರಾಧಿಕಾರ ಸಿಬ್ಬಂದಿಯನ್ನು ಯಾವ ನೇಮಕಾತಿ ನಿಯಮಗಳಡಿ ನೇಮಕ ಮಾಡಿ ಕ್ರಮಬದ್ಧಗೊಳಿಸಲಾಗಿದೆ;

ಉ) ಈ ಪ್ರಾಧಿಕಾರಗಳ ಸಿಬ್ಬಂದಿಯನ್ನು ರಾಜ್ಯಾದ್ಯಂತ ಏಕರೂಪವಾಗಿ ನಿಯಂತ್ರಿಸಲು ವ್ಯಂದ ಮತ್ತು ನೇಮಕಾತಿ ರಚಿಸಲು ಕ್ರಮ ಕೈಗೊಳ್ಳಲಾಗುವುದೇ; ಕೆಲವು ಪ್ರಾಧಿಕಾರವು ಸಿಬ್ಬಂದಿಗಳು ಒಂದೆ ಕಡೆ ಹಲವು